ಮಾಡಿದ್ದಾರೆ. ಅಸ್ಪೃಶ್ಯತೆ, ಜಾತೀಯತೆಯಂ ಕಳಂಕ ನಮ್ಮ ದೇಶದ ಮೇಲೆ ಏನಿದೆ ಅದನ್ನು ತೊಳೆಯುವುದಕ್ಕೆ ಒಂದು ಮಾರ್ಗದರ್ಶನವನ್ನು ತೋರಿಸಿಕೊಟ್ಟಿದ್ದಾರೆ. ಇವತ್ತು ಆ ಮಾರ್ಗದಲ್ಲಿ ನಾವು ಮುಂದುವರೆಯುತ್ತಿದ್ದೇವೆ. ನಾವು ಶೀಘ್ರದಲ್ಲಿ ಆ ಗುರಿಯನ್ನು ಮುಟ್ಟುತ್ತೇವೆ ಎನ್ನುವ ನಂಬಿಕೆ ನಮಗೆ ಇದೆ. ಆದುದರಿಂದ ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರವನ್ನು ಈ ಸದನದಲ್ಲಿ ಪ್ರದರ್ಶಿಸುವಂಥ ಸೂಚನೆ ಸಾಕಷ್ಟು ಸಲ ಬಂದಿದೆ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿದ್ದಾರೆ, ನಮ್ಮೆಲ್ಲರ ಒಪ್ಪಿಗೆಯೂ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಭರವಸೆ ಕೊಡುತ್ತೇನೆ.

ಶ್ರೀ ಐ.ಪಿ.ಡಿ. ಸಾಲಪ್ಪ—ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಇದ್ದ ಕನಸನ್ನು ಇಂದು ನನಸಾಗಿ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರವನ್ನು ಈ ಸದನದಲ್ಲಿ ಹಾಕುತ್ತೇವೆಂದು ಹೇಳಿದ್ದಾರೆ. ಇದರ ಜೊತೆಯಲ್ಲಿ ನಮ್ಮ ಸರ್ಕಾರದ ಎಲ್ಲಾ ಕಛೇರಿಗಳಲ್ಲೂ ಡಾಕ್ಟರ್ ಅಂಬೇಡ್ಕರ್‌ರವರ ಭಾವಚಿತ್ರವನ್ನು ಹಾಕತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಕೈಗೊಳ್ಳಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತಾ, ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಯು. ಬಿ. ಬೋರ್ಕರ್—ಮಾನ್ಯ ಮುಖ್ಯಮಂತ್ರಿಗಳು ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರವನ್ನು ಈ ಸದನದಲ್ಲಿ ಸ್ಥಾಪಿಸುತ್ತೇವೆಂದು ಏನು ಆಶ್ವಾಸನೆ ಕೊಟ್ಟರು ಇದನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಮತ್ತು ಡಾಕ್ಟರ್ ಅಂಬೇಡ್ಕರ್‌ರವರ ಭಾವ ಚಿತ್ರವನ್ನು ಇಲ್ಲಿ ಸ್ಥಾಪಿಸತಕ್ಕಂಥಾದ್ದು ಅಷ್ಟೇ ಅಲ್ಲ ಅಸ್ಪೃಶ್ಯತೆ ಮತ್ತು ಹರಿಜನರ ಸಮಾಜದ ಮೇಲೆ ಅವರಿಗಿರುವ ಕಳಕಳಿಯು ಪ್ರತೀಕದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆಂದು ನಾನು ತಿಳಿಯುತ್ತೇನೆ. ಇದರ ಜೊತೆಯಲ್ಲಿ ಒಂದು ಮಾತನ್ನು ಹೇಳುವುದಾದರೆ, ದಲಿತ ಆಕ್ಷನ್ ಕಮಿಟಿಯವರು ಅನೇಕ ಬೇಡಿಕೆಗಳನ್ನು ಇಟ್ಟಿದ್ದಾರೆ; ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಬೇಡಿಕೆಯಲ್ಲಿರುವಂತೆ ವಿಧಾನಸೌಧದ ಮುಂದೆ ಹೋಗುವಂಥ ರಸ್ತೆ ಏನಿದೆ ಅದಕ್ಕೆ ಕೂಡ ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್‌ರವರ ಹೆಸರನ್ನು ಇಟ್ಟು ಗೌರವಿಸಬೇಕು ಎಂದು ನಾನು ಅವರಲ್ಲಿ ಮನವಿಮಾಡಿಕೊಳ್ಳುತ್ತೇನೆ.

MR. SPEAKER—I call Sri K. S. Kalamari Gowda to participate in the discussion on the Road Transport and Tourism Departments.

Taking up notice about employees of the Poonam Theatre.

ಶ್ರೀ ಎಂ. ಚಂದ್ರಶೇಖರ್—ನಾನು ಒಂದು ಕಾಲಿಂಗ್ ಅಟೆನ್‌ಷನ್ ಕಳಿಸಿಕೊಟ್ಟಿದ್ದೆ. ಏನೆಂದರೆ, ಜಯನಗರದಲ್ಲಿ ಪೂನಂ ಥಿಯೇಟರ್ ಇದೆ. ಆ ಸಿನಿಮಾ ಕಾರ್ಮಿಕರು ಅಲ್ಲಿ ಸ್ಟ್ರೈಕ್ ಮಾಡುತ್ತಿದ್ದಾರೆ. ಪೋಲೀಸರು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಆದುದರಿಂದ ಇದನ್ನು ಇವತ್ತು ತೆಗೆದುಕೊಳ್ಳಬೇಕು.

ಅಧ್ಯಕ್ಷರು—ಅದನ್ನು ನಾನು ನೋಡಿಯೇ ಇಲ್ಲ. I have not yet seen that notice please come to my chamber we will discuss.

SRI S. R. BOMMAI—The hon. Member is telling that there are so many cinema workers who are on strike. Therefore, you allow this adjournment motion. If it is not convenient today, you can take it up tommorrow. ಇವತ್ತು ಅದನ್ನು ತೆಗೆದುಕೊಳ್ಳುವುದಕ್ಕೆ ತೊಂದರೆ ಇದ್ದರೆ ನಾಳೆ ತೆಗೆದುಕೊಳ್ಳಬೇಕು. ಏಕೆಂದರೆ ಅಲ್ಲಿ ಸ್ಟ್ರೈಕ್ ನಡೆಯುತ್ತಾ ಇದೆ, ಉಪವಾಸ ಮಾಡುತ್ತಿದ್ದಾರೆ.
MR. SPEAKER—I will look into that matter.